ಗುಡು ಗುಡು ಉರುಳಿ ನೆಲ ಮುಟ್ಟುತ್ತಿದ್ದವು. ಪಾಪ ಅವಕ್ಕೆ ಯಾವುದೊ ಪಟ್ಟಣ. ನಗರ ಸೇರಿ ಅಲ್ಲಿ ಮಕ್ಕಳು ಮಾಡಿಕೊಳ್ಳುವ ಇಷ್ಟವಿಲ್ಲದ ದಂಪತಿಗಳ ಮೊಟ್ಟೆ ಬೀಜಗಳು ಕಾಂಡೋಮ್ ಎಂಬ ರಬ್ಬರಿನ ಚೀಲದಲ್ಲಿ ಬಂದಿಯಾಗಿ ಕೊಳಚೆ ಸೇರುತ್ತವೆ. ಅದೇ ಕೊಳಚೆಯಲ್ಲಿ ಬಿದ್ದ ವಾಟೆಗಳು ನಗರದ ಉಚ್ಚೆ ಕೊಚ್ಚೆಗಳ ಉರಿಯಲ್ಲಿ ನಿಧಾನಕ್ಕೆ ಉರಿದು ಕೊಳೆತು ಹೋಗುತ್ತವೆ. ಕೆಲವು ಹಟ ಬಿದ್ದು ದಡ ಸೇರಿ ಮೊಳಕೆಯೊಡೆಯುವ ಸಾಹಸ ಮಾಡುತ್ತವೆ. ಕೆಲವೇ ದಿನಗಳಲ್ಲಿ ಅವುಗಳ ಅಸ್ತಿತ್ವವೂ ಅಳಿದು ಹೋಗುತ್ತದೆ.

ಸಾಬರ ಕುಕ್ಕೆಗಳು ಮಾವಿನ ಜೇಡಿಯ ವಾಸನೆಯಿಂದ ಘಾಟು ಹೊಡೆಯುತ್ತಿದ್ದವು. ಹಗ್ಗ, ಬಿದಿರು ಗಳಗಳು ಕರೆಗಟ್ಟಿ ಫಳ ಫಳ ಹೊಳೆಯುತ್ತಿದ್ದವು. ಅವು ಕೆಲವೊಮ್ಮೆ ತಾತ ಮುತ್ತಾತಂದಿರ ಕಾಲದಿಂದಲೂ ಬಳಕೆಯಾಗುತ್ತಿದ್ದವು. ಕಾಯಿ ಕೀಳುವಾಗ ತೊಟ್ಟನ್ನು ವಿರುದ್ಧ ದಿಕ್ಕಿಗೆ ತಿರುಗಿಸಿ ಮುರಿಯಬೇಕು. ಇಲ್ಲದಿದ್ದರೆ ಮುಖ, ಕಣ್ಣು, ಮೈ ಮೇಲೆ ಬಿದ್ದರೆ ಉರಿ ಜೊತೆಗೆ ಚರ್ಮ ಮಾರನೆ ದಿನವೆ ಕಿತ್ತು ಬರುತ್ತದೆ. ಅದರ ಕಲೆ ಹೋಗಲು ಮೂರು ತಿಂಗಳು ಬೇಕು. ಕಾಯಿ ಕೀಳುವಾಗ ಅಕಸ್ಮಾತ್ ಕಾಯಿಗಳು ನೆಲಕ್ಕೆ ಬಿದ್ದರೆ ಕೆಳಗಿನವರಿಂದ ಬೈಗುಳ ತಪ್ಪಿದ್ದಲ್ಲ. ನೆಲಕ್ಕೆ ಬಿದ್ದ ಕಾಯಿ ಯಾವ ಕಾರಣಕ್ಕೂ ಹಣ್ಣಾಗುವುದಿಲ್ಲ, ಕೊಳೆತು ಹೋಗುತ್ತವೆ. ಆದ್ದರಿಂದಲೆ ಅತ್ಯಂತ ಜತನದಿಂದ ಕಾಯಿ ಇಳಿಸಿ ಹಾಲು ಒರೆಸಿ ಅವುಗಳನ್ನು ಒಣಗಿಸಿ ಡಜನ್, ಒಂದೂವರೆ ಡಜನ್ನಿನಂತೆ ಪೆಟ್ಟಿಗೆ ಭತ್ತದ ಹುಲ್ಲಿನಲ್ಲಿಟ್ಟು ಪ್ಯಾಕ್ ಮಾಡುತ್ತಿದ್ದರು. ಅವುಗಳನ್ನು ಪೂನಾ, ಡೆಲ್ಲಿಗೆ ಕಳಿಸುತ್ತಿದ್ದರು. 'ಯಾಕ್ ಸಾಬ್ರೆ ಬಳ್ಳಾಪುರ, ಬೆಂಗ್ಳೂರ್ ಜನಾ ತಿನ್ನಲ್ವಾ' ಅಂದರೆ, 'ಘೂತ್ತೇರಿ ತಗಿ ಮಗಾ ಅತ್ತ, ನಮ್ಮವುರೇನು ತಿನ್ನದು.. ಪೂನಾ, ಬಾಂಬೆ, ದಿಲ್ಲೀ ಜನಾ ಮಾಮಿನಕಾಯಿ ಕಾಲ ಬಂದ್ರೆ ದಿನಾನು ಹಬ್ಬಾನೆ ಅವ್ರುಗೆ. ಬತ್ತೀಯಾ ಪೂನಾಕ್ಕೆ ಲಾರೀಲಿ ಕರ್ಕೊಂಡೋಗ್ತೀನಿ' ಎನ್ನುತ್ತಿದ್ದರು.

ಕಾಯಿ ಕೀಳುವಾಗ ನೆಲದ ಮೇಲಿದ್ದವರು ಹೆಚ್ಚು ಗಾಂಚಾಲಿ ಮಾಡಿದರೆ ಮರದ ಮೇಲಿರುತ್ತಿದ್ದ ನಾವು ಒಬ್ಬರಿಗೊಬ್ಬರು ಕಣ್ಣು ಮಿಟಕಿಸಿಕೊಂಡು ಇಬ್ಬರು ಮೂವರು ಏಕಕಾಲಕ್ಕೆ 'ಇಗಾ' ಎಂದು ಚೀಲಕ್ಕೆ ಒಬ್ಬರು ಹಾಕಿದರೆ ಉಳಿದಿಬ್ಬರು ತಲೆ ಮತ್ತು ಮುಖಕ್ಕೆ ಗುರಿಯಿಟ್ಟು ಎಸೆಯುತ್ತಿದ್ದೆವು. ರಪರಪನೆ ಬಿದ್ದ ಕಾಯಿಗಳ ಏಟು ತಡೆಯಲಾರದೆ ಬೈಯುವಷ್ಟು ಬೈದು ಕಡೆಗೆ 'ಈ ಘಟಿಂಗ್ರ ಸಾವಾಸ ಬ್ಯಾಡಪ್ಪಾ' ಎಂದು ರೇಗುತ್ತಿದ್ದರು. ಕಾಯಿ ಕೀಳುವಾಗ ಮರದಲ್ಲೆ ಹಣ್ಣಾದ ಹದಿನೈದು- ಇಪ್ಪತ್ತು ಹಣ್ಣುಗಳನ್ನು ಒಂದೆ ದಿನ ತಿಂದು ಖುಷಿಪಟ್ಟ ಉದಾಹರಣೆಗಳಿವೆ.

ಸಾಬ್ರು ಕರೆದ ಕೂಡಲೆ ಕಾಯಿ ಇಳಿಸುವುದಕ್ಕೆ ಹೋಗುತ್ತಿದ್ದುದಕ್ಕೆ ಹಲವು ಕಾರಣಗಳಿರುತ್ತಿದ್ದವು. ಸಾಬ್ರು ಬರುವಾಗ ಪ್ಯಾಟೆಯಿಂದ ಪಲಾವು, ಬಿರ್ಯಾನಿ ಪೊಟ್ಟಣ ತರುತ್ತಿದ್ದರು. ಅದರ ಸುವಾಸನೆಯ ಆಕರ್ಷಣೆಯನ್ನು ಗೆಲ್ಲಲಾಗುತ್ತಿರಲಿಲ್ಲ. ಮರದಲ್ಲಿ ಥರಾವರಿ ಹಣ್ಣುಗಳು ಸಿಗುತ್ತಿದ್ದವು. ಅವುಗಳನ್ನು ಹಣ್ಣಾದ ಭಾಗವನ್ನೆ ತಿಂದು ಉಳಿದ ಭಾಗವನ್ನು ದೂರ ಎಸೆಯುತ್ತಿದ್ದೆವು. ಇದನ್ನು ಸಾಬರು ನೋಡಿಯೂ ನೋಡದಂತೆ ಇರುತ್ತಿದ್ದರು. ಇದೆಲ್ಲಕ್ಕಿಂತ ಮುಖ್ಯವಾಗಿ ಕಾಯಿ ಕೀಳುವಾಗ ಕೆಳಗೆ ಇದ್ದವರಿಗೆ ಕಾಣದ ಕಾಯಿಗಳನ್ನು ಮರದಲ್ಲೆ ಬಿಡುತ್ತಿದ್ದೆವು. ಕಾಯಿ ಕಿತ್ತು ಸಾಗಿಸಿದ ಮೇಲೆ ಹಕ್ಕಲು ಕಾಯಿಗಳ ನೆಪದಲ್ಲಿ ಇವುಗಳನ್ನು ಕಿತ್ತು ಮಾಗ ಹಾಕುತ್ತಿದ್ದೆವು.

ಇಷ್ಟೆಲ್ಲದರ ನಡುವೆ ಕಾಯಿ ಇಳಿಸುವುದೇನು ಸಾಮಾನ್ಯದ ಕೆಲಸವಾಗಿರುತ್ತಿರಲಿಲ್ಲ. ಕೆಲವೊಮ್ಮೆ ಹಾವುಗಳು ಮರ ಏರಿ ಸುತ್ತಿಕೊಂಡು ಮಲಗಿರುತ್ತಿದ್ದವು. ಗಾಬರಿ ಹಾವುಗಳು ಮೈ ಮೇಲೆ ಬಿದ್ದುಬಿಡುತ್ತಿದ್ದವು. ಹಕ್ಕಿಗಳು ಗೂಡು ಕಟ್ಟಿ ಮರಿಮಾಡಿರುತ್ತಿದ್ದವು. ಕಾಗೆ, ಹದ್ದುಗಳಿದ್ದರೆ ಹತ್ತಿರ ಹೋಗಲು ಬಿಡುತ್ತಿರಲಿಲ್ಲ. ಕಾಗೆ ತಲೆ ಮುಟ್ಟಬಾರದೆಂಬ ಶಾಸ್ತ್ರ ಬೇರೆ. ಕೆಂಜಿಗಗಳು ಗೂಡು ಕಟ್ಟಿ ದಾಳಿ ಇಳಿಯುತ್ತಿದ್ದವು. ಕೆಲವೊಮ್ಮೆ ಉಗ್ರ ರೂಪಿ ಜೇನುಗಳು ಎಲೆಯ ಮರೆಯಲ್ಲಿ ಜೇನು ಕಟ್ಟಿರುತ್ತಿದ್ದವು. ಎಷ್ಟೊ ಸಾರಿ ಅವುಗಳ ಕಾಟ ತಡಿಯಲಾರದೆ ಬುರ್ರನೆ ಜಾರಿ ಮೈ ಕೈಯೆಲ್ಲ ಪರಚಿಕೊಂಡು ಕೆಳಕ್ಕೆ ಬಿದ್ದ ಉದಾಹರಣೆಗಳಿವೆ. ಮಾವಿನ ಮರದಲ್ಲಿ ಬಲೆಯಂತೆ ಕೊಂಬೆಗಳು ಹೆಣೆದುಕೊಳ್ಳುವುದರಿಂದ ಜೀವ ಹೋಗುವ ಸಾಧ್ಯತೆ ಕಡಿಮೆ. ನಾಟಿ ಮರಗಳಲ್ಲಿ ಮಾತ್ರ ಸಾಧ್ಯತೆ ಹೆಚ್ಚು. ಹೀಗೆ ಕಾಯಿ ಇಳಿಸಿ ಲೋಡು ಮಾಡಿ ಸಂಜೆಯ ಹೊತ್ತಿಗೆ ಹೊರಡುತ್ತಿದ್ದವು.

ಕಾಯಿಯನ್ನು ಲಾರಿ, ಟೆಂಪೊಗಳಿಗೆ ತುಂಬುವ